RNU AIR DHARWAD

NOVEMBER 09, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಕರ್ನಾಟಕವನ್ನು, ಜಾಗತಿಕ ಮಟ್ಟದ ಕ್ವಾಂಟಮ್ ತಂತ್ರಜ್ಞಾನ ಮತ್ತು ಆವಿ ್ಕಾರಗಳ ಪ್ರಮುಖ ಕೇಂದ್ರವಾಗಿ ರೂಪಿಸುವ ನಿಟ್ಟಿನಲ್ಲಿ, ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಅಜಯ ಧರ್ಮ ಸಿಂಗ್ ಹೇಳಿದರು. ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ಪೂರ್ವಭಾವಿಯಾಗಿ, ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಆಯೋಜಿತ, ಕ್ವಾಂಟಮ್ ಕಂಪನಿ ಉದ್ಯಮಿಗಳು ಹಾಗೂ ತಜ್ಞರೊಂದಿಗೆ, ಕ್ವಾಂಟಮ್ ರೌಂಡ್‌ಟೇಬಲ್ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು. ರಾಜ್ಯದ ಕ್ವಾಂಟಮ್ ಸಿಟಿ ಯೋಜನೆ, ಕೈಗಾರಿಕಾ ಸಹಭಾಗಿತ್ವ ಹಾಗೂ ತಂತ್ರಜ್ಞಾನ ಅಭಿವೃದ್ಧಿ ಮತ್ತು ಹೂಡಿಕೆ ಅವಕಾಶಗಳನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸೈನಿಕರೊಂದಿಗೆ ದೀಪಾವಳಿ ಆಚರಿಸಿದರು. ಛತ್ತೀಸ್‌ಘಡದ, ನಕ್ಸಲ್ ಬಾಧಿತ ಪ್ರದೇಶ ಬಸ್ತರ್‌ನಲ್ಲಿ, ಸಶಸ್ತ್ರ ಪಡೆಯ ಯೋಧರೊಂದಿಗೆ, ದೀಪಾವಳಿ ಸಂಭ್ರಮಾಚರಣೆ ಕೈಗೊಂಡರು. ಈ ವೇಳೆ, ಸೈನಿಕರಿಗೆ ಸ್ವತಃ ಸಿಹಿ ಹಂಚಿದ ಪ್ರಧಾನಮಂತ್ರಿ, ಯೋಧರ ನೃತ್ಯಕ್ಕೆ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು.

<><><>

ನಾಳೆ, ಮಂಗಳವಾರ ಗೋ ಪೂಜೆ ಹಾಗೂ ಬಲಿಪಾಡ್ಯಮಿ ಆಚರಣೆ ನಡೆಯಲಿದೆ. ಗೋ ಪೂಜೆಯನ್ನು ಗೋವರ್ಧನ ಪೂಜೆ ಎಂದೂ ಕರೆಯಲಾಗುತ್ತದೆ. ಈ ದಿನ ಬಲಿಚಕ್ರವರ್ತಿಯು ಭೂಮಿಗೆ ಆಗಮಿಸುತ್ತಾನೆ ಎಂಬ ನಂಬಿಕೆಯಿದೆ. ಜನರು ಗೋವುಗಳಿಗೆ ಪೂಜೆ ಸಲ್ಲಿಸುವುದರ ಜೊತೆಗೆ, ಶ್ರೀಕೃ ್ಣನನ್ನು ಆರಾಧಿಸುತ್ತಾರೆ.

<><><>

ಬೆಂಗಳೂರು ನಗರದಲ್ಲಿ, ಪಟಾಕಿ ಅವಘಡದಿಂದ 32 ಜನರ ಕಣ್ಣಿಗೆ ಗಾಯಗಳಾದ ಘಟನೆ ವರದಿಯಾಗಿದೆ. ನಾರಾಯಣ ನೇತ್ರಾಲಯದಲ್ಲಿ, ಒಟ್ಟು 20 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಗೊಂಡವರಲ್ಲಿ, 7 ಜನ ವಯಸ್ಕರು ಹಾಗೂ 13 ಜನ ಮಕ್ಕಳಿದ್ದಾರೆ. ದೀಪಾವಳಿ ಹಬ್ಬದ ಸಂದರ್ಭ, ಪಟಾಕಿ ಸಿಡಿಸುವಾಗ ಜಾಗ್ರತೆ ಪಾಲಿಸುವಂತೆ, ಪ್ರದೇಶ ಸಮಾಚಾರದ ಮೂಲಕ ಕೋರಿದ್ದಾರೆ, ಧಾರವಾಡದ ನೇತ್ರ ತಜ್ಞರಾದ ಡಾಕ್ಟರ ನೀತಾ ಸಾಂಬ್ರಾಣಿ.

<><><>

ಡಾಕ್ಟರ ನೀತಾ ಸಾಂಬ್ರಾಣಿ ಧ್ವನಿ– 42 ಸೆಕೆಂದುಗಳು

<><><>

ಶಿಶುಗಳ ರಕ್ಷಣೆ ಕುರಿತು, ಜನ ಜಾಗೃತಿ ಮೂಡಿಸಲು, ಮಕ್ಕಳ ರಕ್ಷಣಾ ದಿನವನ್ನು ಇಂದು ವಿವಿಧೆಡೆ ಆಚರಿಸಲಾಗುತ್ತಿದೆ. ಶಿಶುಗಳು ಎದುರಿಸುವ ಸವಾಲುಗಳು, ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಖಚಿತಪಡಿಸುವ ಮಹತ್ವದ ಬಗ್ಗೆ, ಅರಿವು ಮೂಡಿಸುತ್ತದೆ.

<><><>

ಶ್ರೀ ಸಾಮಾನ್ಯರ ಆರೋಗ್ಯದ ಹಿತದೃಷ್ಟಿಯಿಂದ, ರಾಜ್ಯದ ಉಪಾಹಾರ ಗೃಹ ಮತ್ತು ಹೋಟೆಲ್‌ಗಳ ಮೇಲೆ, ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಗಮನವಿಟ್ಟಿದ್ದಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಯು.ಟಿ. ಖಾದರ್, ತಿಳಿಸಿದ್ದಾರೆ. ಬಳ್ಳಾರಿಯಲ್ಲಿ ಈ ವಿಷಯ ತಿಳಿಸಿದ ಅವರು, ಆಹಾರದ ಗುಣಮಟ್ಟ, ಶುಚಿತ್ವ ಹಾಗೂ ನೈರ್ಮಲ್ಯ ಕಾಪಾಡುವಲ್ಲಿ, ಸಾರ್ವಜನಿಕರ ಸಹಭಾಗಿತ್ವ ತುಂಬ ಅಗತ್ಯವಾಗಿದೆ. ಆಹಾರ ಸುರಕ್ಷತೆ ಕುರಿತು ದೂರುಗಳಿದ್ದರೆ, ನಾಗರಿಕರು ಕ್ಯೂ.ಆರ್. ಕೋಡ್ ಸ್ಕ್ಯಾನ್ ಮಾಡಿ, ಕೂಡಲೇ ದೂರು ನೀಡುವ, ವ್ಯವಸ್ಥೆ ರೂಪಿಸಲಾಗಿದೆ, ಎಂದರು.

<><><>

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ತಮ್ಮ ಕುಟುಂಬ ಸಮೇತ, ಶ್ರೀ ಹಾಸನಂಬಾ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿಗಳ, ದರ್ಶನ ಪಡೆದರು. ಹಾಸನಾಂಬಾ ಕ್ರೀಡೋತ್ಸವಕ್ಕೆ, ಚಾಲನೆ ನೀಡಿದರು. ಹಾಸನಾಂಬಾ ದೇವಾಲಯದ ಸಂಕೀರ್ಣವನ್ನು, ಅಭಿವೃದ್ಧಿ ಪಡಿಸುವುದಾಗಿ, ತಿಳಿಸಿದರು. ಬಳಿಕ, ಹಾಸನ ತಾಲೂಕು, ಬೀಕನಹಳ್ಳಿಯ ಶ್ರೀ ಪುರದಮ್ಮ ದೇವಾಲಯಕ್ಕೆ, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಭೇಟಿ ನೀಡಿ, ದೇವರ ದರ್ಶನ ಪಡೆದರು.ಅಭಿಮಾನಿಗಳ ಹರಕೆ ಹಿನ್ನೆಲೆ, ದೇವಾಲಯಕ್ಕೆ ಆಗಮಿಸಿ, ದೇವರ ದರ್ಶನ ಪಡೆದಿರುವುದಾಗಿ ತಿಳಿಸಿದರು.

<><><>

ಕನ್ನಡ ಚಿತ್ರರಂಗದ ಅಪರೂಪದ ಪ್ರತಿಭೆ, ಕರುನಾಡಿನ ಹೆಮ್ಮೆಯ ಕಲಾವಿದ ರಾಗಿದ್ದ ಶಂಕರ್ ನಾಗ್ ಅವರ ಜನ್ಮ ದಿನವಿಂದು. ನಟ, ನಿರ್ದೇಶಕ ಹಾಗೂ ರಂಗಕರ್ಮಿಯಾಗಿ ತಮ್ಮ ಬಹುಮುಖ ಪ್ರತಿಭೆಯಿಂದ ಕನ್ನಡ ಚಿತ್ರರಂಗಕ್ಕೆ ಹೊಸ ಆಯಾಮ ನೀಡಿದ್ದ, ಶಂಕರ ನಾಗ ಅವರ, ಕಲಾತ್ಮಕ ದೃಷ್ಟಿಕೋನ, ನವೀನ ಚಿಂತನೆ ಇಂದಿಗೂ ಸ್ಫೂರ್ತಿಯಾಗಿದೆ ಎಂದು ಕೇಂದ್ರ ಶಿಕ್ಷಣ ಖಾತೆ ಸಚಿವ ಪ್ರಲ್ಹಾದ್ ಜೋಶಿ ತಮ್ಮ ಸಾಮಾಜಿಕ ಜಾಲತಾಣದ ಮೂಲಕ ಬಣ್ಣಿಸಿದ್ದಾರೆ.

<><><>

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬೆಂಗಳೂರಿನಲ್ಲಿ ಇಂದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಲಿದ್ದಾರೆ. ಬಿಡಿಎ ಕೈಗೊಂಡಿರುವ ನಗರ ಮೂಲಸೌಕರ್ಯ ಯೋಜನೆಗಳ ಕಾಮಗಾರಿ ಸ್ಥಿತಿಗತಿಯನ್ನು ಪರಾಮರ್ಶಿಸಲಿರುವ ಅವರು, ನಂತರ ಹೊಸ ಯೋಜನೆಗಳನ್ನು ಪ್ರಕಟಿಸುವ ಸಾಧ್ಯತೆಯಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>